ಅ.ದಾ. ನಂ.348/2020                                        ಪಿ .ಡಬ್ಲ್ಯೂ-1

ದಿನಾಂಕಃ 10.12.2025 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ ಎಸ್  ವಕೀಲರಿಂದಃ**

1. ಯಾವಾಗ ಯಾರಿಗೆ ಎಷ್ಟು ಹಣ ಕೊಟ್ಟಿರುತ್ತೀರ ಎಂದರೆ ಪ್ರತಿವಾದಿಗೆ 3 ಲಕ್ಷ ನೀಡಿರುತ್ತೇನೆ. 3.5 ಲಕ್ಷಕ್ಕೆ ಕ್ರಯ ಕರಾರಾಗಿರುತ್ತದೆ. ಎಲ್ಲಿ ಮಾತುಕತೆಯಾಗಿರುತ್ತದೆ ಎಂದರೆ ನಮ್ಮ ಮನೆಯಲ್ಲಿ. ಆ ಸಮಯದಲ್ಲಿ ಪ್ರತಿವಾದಿ ಮತ್ತು ಅವರ ತಮ್ಮ, ನಟೇಶ್ ಇದ್ದರು. ಪ್ರತಿವಾದಿಯ ತಮ್ಮ ಸಹ ಕ್ರಯ ಕರಾರಿಗೆ ಸಾಕ್ಷಿದಾರರಾಗಿರುತ್ತಾರೆ. ದಾವಾ ಸ್ವತ್ತು ಯಾರಿಂದ ಯಾರಿಗೆ ಬಂದಿರುತ್ತದೆ ಎಂದರೆ ಪ್ರತಿವಾದಿಯ ಗಂಡನಿಂದ ಜೀವನಾಂಶಕ್ಕಾಗಿ ಪ್ರತಿವಾದಿಗೆ ಬಂದಿರುತ್ತದೆ. ಪ್ರತಿವಾದಿಯ ಗಂಡನಿಗೆ ದಾವಾ ಸ್ವತ್ತು ಹೇಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಶಿವಯ್ಯರವರಿಗೆ ಪ್ರತಿವಾದಿ ಎಷ್ಟನೇ ಹೆಂಡತಿ ಎಂದರೆ ಗೊತ್ತಿಲ್ಲ. ಶಿವಯ್ಯರವರಿಗೆ ಜಯಮ್ಮ ಎಂಬ ಮೊದಲ ಹೆಂಡತಿ ಇರುತ್ತಾರೆ ಎಂದರೆ ಗೊತ್ತಿಲ್ಲ. ಜಯಮ್ಮರವರು ಹಾಸನ ನ್ಯಾಯಾಲಯದಲ್ಲಿ ದಾಖಲಿಸಿರುವ ಜೀವನಾಂಶ ಪ್ರಕರಣದಲ್ಲಿ ದಾವಾ ಸ್ವತ್ತಿಗೆ ಮುಟ್ಟುಗೋಲು ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಅದರ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

2. ಯಾವ ದಿನಾಂಕ ಹಣ ಕೊಟ್ಟಿರುತ್ತೀರ ಎಂದರೆ ದಿ.13.02.2020 ರಂದು 1 ಲಕ್ಷ ಹಣವನ್ನು ಚೆಕ್ ಮುಖಾಂತರ ನೀಡಿರುತ್ತೇನೆ. 2 ಲಕ್ಷ ನಗದಾಗಿ ನೀಡಿರುತ್ತೇನೆ. 3 ಲಕ್ಷಕ್ಕೆ ಚೆಕ್ ನೀಡಲು ತೊಂದರೆ ಇರಲಿಲ್ಲ ಎಂದರೆ ಪ್ರತಿವಾದಿ ತುರ್ತಾಗಿ ಹಣ ಬೇಕೆಂದು ಕೇಳಿದ ಕಾರಣ ನಗದಾಗಿ ನೀಡಿರುತ್ತೇನೆ. ಕ್ರಯ ಪತ್ರ ಯಾವಾಗ ನೋಂದಣಿ ಮಾಡುವುದಾಗಿ ಮಾತುಕತೆಯಾಗಿರುತ್ತದೆ ಎಂದರೆ ಕ್ರಯ ಕರಾರಾದ 9 ತಿಂಗಳು. 9 ತಿಂಗಳ ನಂತರ ಪ್ರತಿವಾದಿಯನ್ನು ಕೇಳಿರುತ್ತೀರ ಎಂದರೆ ಕೇಳಿರುತ್ತೇನೆ. ಪ್ರತಿವಾದಿಯನ್ನು ಕೇಳಿದಾಗ ಲಿಖಿತ ದಾಖಲಾತಿ ಆಗಿದೆಯೇ ಎಂದರೆ ಇಲ್ಲ. ಉಳಿದ 50

ಸಾವಿರ ಹಣವನ್ನು ನ್ಯಾಯಾಲಯದಲ್ಲಿ ಜಮಾ ಮಾಡಿದ್ದೀರ ಎಂದರೆ ಇಲ್ಲ. ಕ್ರಯ ಮಾಡಲು ಪ್ರಯತ್ನಿಸಿದ್ದರೆ 50 ಸಾವಿರ ಹಣವನ್ನು ನ್ಯಾಯಾಲಯಕ್ಕೆ ಜಮಾ ಮಾಡಬಹುದಿತ್ತು ಎಂದರೆ ನೋಂದಣಿ ದಿನ ನೀಡುವುದಾಗಿ ಮಾತುಕತೆ ಆಗಿರುತ್ತದೆ. ಪ್ರತಿವಾದಿಗೆ ನೋಟೀಸ್ ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟೀಸಿನಲ್ಲಿ 50 ಸಾವಿರ ಹಣವನ್ನು ನ್ಯಾಯಾಲಯಕ್ಕೆ ಠೇವಣಿ ಇಡುವುದಾಗಿ ತಿಳಿಸಿದ್ದೀರ ಎಂದರೆ ಇಲ್ಲ ಆದರೆ ನನ್ನ ಬಳಿ 50 ಸಾವಿರ ಇಟ್ಟುಕೊಂಡಿರುತ್ತೇನೆ.

(ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.